# ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿನ ಮಹತ್ವ

**ಎಂ. ಬಸವರಾಜು**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ.

**Article Link: https://aksharasurya.com/2024/03/basavaraju-m.php**

**DOI: https://doi.org/10.5281/zenodo.10775233**

## ABSTRACT:

ಪ್ರಸ್ತುತ ಲೇಖನವು ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿನ ಮಹತ್ವ ಮತ್ತು ಗುರು ಹಾಗೂ ಶಿಷ್ಯರ ನಡುವಿನ ಸಂಬಂಧದ ಕುರಿತು ಚರ್ಚಿಸುತ್ತದೆ. ಈ ಕುರಿತು ಸರ್ವಜ್ಞನಲ್ಲಿ 80 ಕ್ಕೂ ಹೆಚ್ಚು ತ್ರಿಪದಿಗಳು ಸಿಗುತ್ತದೆ. ಶಿಕ್ಷಣದ ದೃಷ್ಟಿಯಿಂದ ನೋಡಿದರೆ ಸರ್ವಜ್ಞನು ಒಬ್ಬ ಸಾಮಾಜಿಕ ಗುರು ಎಂದು ಹೇಳಬಹುದು. ಇಂದು ಗುರು ಮತ್ತು ಶಿಷ್ಯರ ನಡುವಿನ ಸಂಬಂಧದಲ್ಲಿ ಬಿರುಕು ಇದೆ. ಗುರುವಿನ ಮಹತ್ವ, ಗುರು ಪದ್ಧತಿ, ಗುರುಬೋಧ ವಿಷಯ, ಗುರುಕರಣ ವಿಷಯ ಮತ್ತು ಗುರುವಿನಿಂದ ಮುಕ್ತಿ ಇತ್ಯಾದಿ.

ಸರ್ವಜ್ಞದೃಷ್ಟಿಯಲ್ಲಿ ಗುರು ಒಬ್ಬ ಶಿವ, ಕರುಣಾಮಯಿ, ಜ್ಯೋತಿ, ಮಾರ್ಗದರ್ಶಕ, ಬಂಧು, ದೈವ, ಕಲ್ಪವೃಕ್ಷ, ಮತ್ತು ಕಾಮದೇನು. ಇದನ್ನು ತನ್ನ ತ್ರಿಪದಿಗಳಲ್ಲಿ ಉಪಮಾ, ಯಮಕ, ರೂಪಕ ಮತ್ತು ದೃಷ್ಟಾಂತ ಅಲಂಕಾರಗಳ ಮೂಲಕ ವಿವರಿಸಿದ್ದಾನೆ.

## KEYWORDS:

ಸರ್ವಜ್ಞ, ವಚನ, ಗುರುವಿನ ಮಹತ್ವ, ಗುರು ಪದ್ಧತಿ, ಗುರುಬೋಧ ವಿಷಯ, ಗುರುಕರಣ ವಿಷಯ, ಗುರುವಿನಿಂದ ಮುಕ್ತಿ.

**ಗುರುಬ್ರಹ್ಮ ಗುರುವಿಷ್ಣು ಗುರುದೇವೊ ಮಹೇಶ್ವರಃ।**
**ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ॥**

ಕನ್ನಡ ನಾಡಿನ ಮನೆಮನೆಯ ಕವಿ ಎಂದೇ ಪ್ರಸಿದ್ಧಿ ಪಡೆದಿರುವ ಹಾಗೂ ಕನ್ನಡದ ತ್ರಿಪದಿ ಸಾಹಿತ್ಯದ ಪ್ರಮುಖ ಕವಿ ಸರ್ವಜ್ಞ, ಈತನ ಕಾಲ 16ನೇ ಶತಮಾನದ ಆದಿಭಾಗ ಎಂದು ಪರಿಗಣಿಸಬಹುದು. ಹಾವೇರಿ ಜಿಲ್ಲೆಯ

ಹಿರೇಕೆರೂರ ತಾಲೂಕಿನ ಅಂಬಲೂರು ಈತನ ಜನ್ಮಸ್ಥಳ. ಈತನ ಬಾಲ್ಯಜೀವನ ಮತ್ತು ಶಿಕ್ಷಣದ ಬಗ್ಗೆ ಹೆಚ್ಚು ತಿಳಿಯುವುದಿಲ್ಲ.

**ಸರ್ವಜ್ಞನೆಂಬುವನು ಗರ್ವದಿಂದಾದವನೆ?**
**ಸರ್ವರೊಳೊಂದು ನುಡಿಗಲಿತು ವಿದ್ಯೆಯ**
**ಪರ್ವತವೇ ಆದ ಸರ್ವಜ್ಞ**

ಅವನಿಗೆ ಸಮಾಜವೇ ಒಂದು ದೊಡ್ಡ ವಿಶ್ವವಿದ್ಯಾನಿಲಯ ಈತನ ಹೆಸರಲ್ಲಿ ಎರಡು ಸಾವಿರಕ್ಕೂ ಹೆಚ್ಚು ವಚನಗಳನ್ನು ಶ್ರೀ ಚನ್ನಪ್ಪ ಉತ್ತಂಗಿಯವರು ಸಂಪಾದಿಸಿರುವುದು ಅತ್ಯಂತ ಶ್ಲಾಘನೀಯವಾದ ಕೆಲಸ. ಸರ್ವಜ್ಞ ತ್ರಿಪದಿಗಳಲ್ಲಿ ಗುರು ಮತ್ತು ಗುರು ಹಾಗೂ ಶಿಷ್ಯರ ನಡುವಿನ ಸಂಬಂಧದ ಬಗ್ಗೆ 80 ಕ್ಕೂ ಹೆಚ್ಚು ತ್ರಿಪದಿಗಳು ಸಿಗುತ್ತದೆ. ಗುರು ಪದ್ಧತಿ, ಗುರುಬೋಧ ವಿಷಯ, ಗುರುಕರಣ ವಿಷಯ ಮತ್ತು ಗುರುವಿನಿಂದ ಮುಕ್ತಿ ಇತ್ಯಾದಿ.

ಸರ್ವಜ್ಞ ದೃಷ್ಟಿಯಲ್ಲಿ ಗುರು ಒಬ್ಬ ಶಿವ, ಕರುಣಾಮಯಿ, ಜ್ಯೋತಿ, ಮಾರ್ಗದರ್ಶಕ, ಬಂಧು, ದೈವ, ಕಲ್ಪವೃಕ್ಷ, ಮತ್ತು ಕಾಮದೇನು. ಇದನ್ನು ತನ್ನ ತ್ರಿಪದಿಗಳಲ್ಲಿ ಉಪಮಾ, ಯಮಕ, ರೂಪಕ ಮತ್ತು ದೃಷ್ಟಾಂತ ಅಲಂಕಾರಗಳ ಮೂಲಕ ವಿವರಿಸಿದ್ದಾನೆ.

ಗುರು ಯಾರು? ನಾವು ನಡೆದ ದಾರಿಗೆ ಯಾರು ಬೆಳಕಾಗಿ ನಿಲ್ಲುತ್ತಾರೋ ಅಂಥವರನ್ನು ಗುರು ಎಂದು ಜಗತ್ತು ಗೌರವಿಸಿದೆ. ಯಾವುದೋ ಗೊತ್ತಿಲ್ಲದ ಗುರಿ ಹಿಡಿದು ಹೊರಟವರನ್ನು ಕೈಹಿಡಿದು ನಡೆಸಿ ಆತ ಕಂಡ ಕನಸಿಗೆ ನೀರೆರೆದು ಪೋಷಿಸಿ ಕನಸಿನ ಬೀಜ ನಾಳೆ ಫಲವಾಗಿ ನಾಲ್ವರಿಗೆ ನೇರಳಾಗಿ ಪರೋಪಕಾರಿಯಾಗುವವರೆಗೂ ಒಬ್ಬ ಗುರುವಿನ ಪಾತ್ರ ಅತ್ಯಂತ ಮಹತ್ವದಾಗಿರುತ್ತದೆ.

ಗುರು ಎಂಬ ನಾಮಪದದ ಅರ್ಥವು ಸಂಸ್ಕೃತದಲ್ಲಿ ಶಿಕ್ಷಕ ಅಥವಾ ಅಧ್ಯಾತ್ಮ ಬೋಧಕ ಎಂದಾಗುತ್ತದೆ. ಹಾಗೆಯೇ ಸಂಸ್ಕೃತದಿಂದ ಈ ಶಬ್ದವನ್ನು ತೆಗೆದುಕೊಂಡಿರುವ ಹಿಂದಿ, ಮರಾಠಿ, ಬಂಗಾಳಿ, ಗುಜರಾತಿ, ಕನ್ನಡ, ತೆಲಗು ಮತ್ತು ನೇಪಾಳಿ ಭಾಷೆಗಳಲ್ಲಿಯೂ ಕೂಡ ಇದೇ ಅರ್ಥವನ್ನು ಇದು ನೀಡುತ್ತದೆ. ಗುರು ಅಂದರೆ ನಿರ್ದಿಷ್ಟ ವಿಭಾಗದಲ್ಲಿ ಹೆಚ್ಚಿನ ಜ್ಞಾನ, ಬುದ್ಧಿವಂತಿಕೆ ಮತ್ತು ನಿಪುಣತೆಯನ್ನು ಹೊಂದಿರುವ ಹಾಗೂ ಇತರಿಗೆ ನಿರ್ದೇಶನವನ್ನು ನೀಡಲು (ಶಿಕ್ಷಕ) ಈ ಬುದ್ಧಿವಂತಿಕೆಗಳನ್ನು ಬಳಸುವ ವ್ಯಕ್ತಿಯಾಗಿರುತ್ತದೆ.

ಸಂಸ್ಕತದಲ್ಲಿ ಗು ಎಂದರೆ ಅಂಧಕಾರ ಅಜ್ಞಾನ ಎಂಬರ್ಥವಿದೆ. ರು ಎಂದರೆ ಅಜ್ಞಾನವನ್ನು ನಾಶಪಡಿಸುವವನು ಎಂದಾಗುತ್ತದೆ. ಬಹುತೇಕ ಜನರು

ಗುರುವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಪರಿಗಣಿಸುತ್ತಾರೆ. ಗು ಅಂದರೆ ಅಂಧಕಾರ (ಕತ್ತಲು), ರು ಅಂದರೆ ಬೆಳಕು ಅರಿವಿನ ಅಭಿವೃದ್ದಿಯ ಒಂದು ಮೂಲತತ್ವವಾಗಿ ಇದು ಕಾಲ್ಪನಿಕತೆಯಿಂದ ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುತ್ತದೆ. ಈ ಗುರು ಪರಂಪರೆಯ ತತ್ವವು ಭೂಮಿಯಲ್ಲಿ ಒಂದು ದೈವಿಕ ಮೂರ್ತ ರೂಪ ಎಂದಾಗುತ್ತದೆ.

'ವರ್ಣವೊಂದು ಕಲಿಸಿದಾತಂ ಗುರು' ಅಂದರೆ ಅಕ್ಷರಗಳನ್ನು ಕಲಿಸಿದವನೇ ಗುರು. ಅರಿವಿನ ದಾರಿ ತೋರಿದವನೆ ಗುರು. ಮನುಷ್ಯನಲ್ಲಿ ಅಜ್ಞಾನವನ್ನು ನಿವಾರಿಸಿ ಅವನ ಜೀವನಕ್ಕೆ ಧಾರ್ಮಿಕ ತಳಹದಿಗಳಲ್ಲಿ ನೈತಿಕ ನೀತಿ ನಿಯಮಗಳ ಮೂಲಕ ಸದ್ವಿವಿವೇಕವನ್ನು ನೀಡಿ ಕಾಪಾಡುವವನು ಗುರು. ಆತನ ಜ್ಞಾನ ದರ್ಶನ ರೂಪವಾದದ್ದು ಹಾಗಾಗಿ ಗುರುವು ಒಬ್ಬ ದಾರ್ಶನಿಕ.

ಗುರು ಎಂಬ ಶಬ್ದವು ವ್ಯಾಪಕವಾಗಿ ಶಿಕ್ಷಕ ಎಂಬ ಸಾಮಾನ್ಯ ಅರ್ಥದ ಜೊತೆ ಬಳಸಲ್ಪಡುತ್ತದೆ. ಗುರು ಶಬ್ದವು ಗು ಮತ್ತು ರು ಅಕ್ಷರಗಳಿಂದ ರಚಿತವಾಗಲ್ಪಟ್ಟಿದೆ.

**ಗುಕಾರೋಂಧಕಾರತ್ಯಾತ್‌ರುಕಾರೋತನ್ನಿವಾರಕ**

ಗುರು ಜಾತ್ಯಾತೀತ. ಗುರು ಬೋಧನೆ ಆತ್ಮಜ್ಞಾನ, ಮೋಕ್ಷ. ಅವನು ಕಲಿಸುವ ಬೋಧನೆ ಅಂತರಂಗದ ಭಾವನೆಗಳಿಗೆ ಸಂಬಂಧಿಸಿದಂತೆ, ಹೊರಗೆ ಕಾಣುವುದಿಲ್ಲ. ಅದು ಐಕ್ಯತೆಯಾಗಿರುತ್ತದೆ. ಅದನ್ನು ಸ್ವಅನುಭವ ಎಂದು ನಾವು ಹೇಳಬಹುದು.

**ಊರಿಂಗೆ ದಾರಿಯನು । ಆರು ತೋರಿದಡೇನು**
**ಸಾರಾಯದ ನಿಜವ ತೋರುವ ಗುರುವು ತಾ**
**ನಾರಾದಡೇನು ಸರ್ವಜ್ಞ**

ಊರಿಗೆ ದಾರಿಯನ್ನು ಯಾರಾದರೂ ತೋರಿಸುತ್ತಾರೆ. ಆದರೆ ಸತ್ಯ ಅಥವಾ ಜ್ಞಾನ ಹಾಗೂ ಮೋಕ್ಷದ ದಾರಿಯ ತೋರುವವನು ನಿಜವಾದ ಗುರು ಎಂದಿದ್ದಾನೆ.

**ಬಂಧುಗಳು ಆದವರು । ಬಂದಂಡು ಹೋಗುವರು**
**ಬಂಧನವ ಕಳೆಯಲರಿಯರು, ಗುರುವಿನಿಂದ**
**ಬಂಧುಗಳ ಉಂಟೆ ಸರ್ವಜ್ಞ**

ಗುರು ಬಂಧುವಿಗಿಂತ ಹೆಚ್ಚು. ಏಕೆಂದರೆ ಬಂಧುಗಳು ಬಂದು ಊಟ ಮಾಡಿ ಹೋಗುವರು. ಆದರೆ ಬಂಧನವನ್ನ ಕಳೆಯಲಾರರು. ಗುರು ಬಂಧು ಆಗದಿದ್ದರೂ ಬಂಧನವನ್ನು ಬಿಡಿಸುತ್ತಾನೆ. ಗುರುವಿನಲ್ಲಿ ಆ ಗುಣ ಇರುತ್ತದೆ.

ಗುರುವಿಗಿಂತ ಒಳ್ಳೆಯ ಬಂಧು ಯಾರು ಇಲ್ಲ.

**ತಂದೆಗೂ ಗುರುವಿಗೂ । ಒಂದು ಅಂತರವುಂಟು**
**ತಂದೆ ತೋರುವನು ಸದ್ಗುರುವ, ಗುರುರಾಯ**
**ಬಂಧನವ ಕಳೆವ ಸರ್ವಜ್ಞ**

ತಂದೆ ಗುರುವಿಗೂ ಒಂದು ಅಂತರವಿದೆ, ಅಂದರೆ ತಂದೆ ಜನ್ಮ ಕೊಟ್ಟು ಗುರುವನ್ನು ತೋರಿಸುತ್ತಾನೆ. ಆದರೆ ಬಂಧನವನ್ನ ಬಿಡಿಸಲಾರನು. ಆದರೆ ಸದ್ಗುರು ಬಂಧನವನ್ನ ಬಿಡಿಸಿ, ಅಂದರೆ ಅಜ್ಞಾನವನ್ನ ತೋಗಲಾಡಿಸಿ, ಜ್ಞಾನವನ್ನು ತೋರಿಸುವನು.

**ಗುರುವಿಂಗೆ ದೈವಕ್ಕೆ । ಹಿರಿದು ಅಂತರವುಂಟು**
**ಗುರುತೋರ್ವ ದೈವದೆಡೆಯನು, ದೈವ ತಾ**
**ಗುರುವ ತೋರುವದೆ? ಸರ್ವಜ್ಞ**

ಗುರುವಿಗೂ ದೇವರಿಗೂ ಒಂದು ಅಂತರವಿದೆ. ಗುರು ದೇವರನ್ನು ತೋರಿಸುತ್ತಾನೆ. ಆದರೆ ದೇವರು ಗುರುವನ್ನು ತೋರಿಸಲಾರನು. ಹಾಗಾಗಿ ದೇವರಿಗಿಂತ ಗುರುವೇ ಹೆಚ್ಚು. ಗುರು ಬರೀ ನರನಲ್ಲ ದೈವ. ನರನಲ್ಲಿ ಕೆಡಕನ್ನು ಮಾಡುವ ಗುಣ ಇರುತ್ತದೆ. ಆದರೆ ದೇವರಲ್ಲಿ ಈ ಗುಣ ಇರುವುದಿಲ್ಲ.

ಗುರು ಆಗಬೇಕಾದರೂ ಸ್ಪಷ್ಟವಾಗಿ ಕೆಲವು ಅರ್ಹತೆಗಳು ಇರಬೇಕೆಂದು ಸರ್ವಜ್ಞನು ತನ್ನ ತ್ರಿಪದಿಗಳಲ್ಲಿ ತಿಳಿಸಿದ್ದಾನೆ. ಗುರುವಿನ ಮಹತ್ವ ತಿಳಿದುಕೊಂಡರೆ ಬ್ರಹ್ಮಾಂಡದ ತಿಳಿಸಿ ಹೊರಗೆ ಬೆಳಕನ್ನು ನೀಡಿ ಪರಿಪೂರ್ಣ ವ್ಯಕ್ತಿಯಾಗುವಂತೆ ಮಾಡುತ್ತಾನೆ. ಇರುವ ಒಳ್ಳೆಯತನ ತೋರಿಸಬೇಕು. ಅದು ಹೇಗೆಂದರೆ ಮರದೊಳಗೆ ಅಗ್ನಿ ಇರುವಂತೆ. ತನ್ನನ್ನು ತಾನು ಅರಿಯುವಂತೆ ಮಾಡಬೇಕು ಗುರು. ಶಿವ ಮುಖನಂತೆ ಗುರು ಕರಣೆ ತೋರುವುದು. ಕತ್ತಲಾದರೂ ಕಣ್ಣಲ್ಲಿ ಬೆಳಕು ಅಥವಾ ಜ್ಯೋತಿ ಕಾಣುವಂತೆ ಗುರು ಶಿವನಂತೆ ದಾರಿ ತೋರುವವನು.

**ಗುರುವ ನರನೆಂದವಗೆ । ಹರನ ಶಿಲೆಯೆಂದವಗೆ**
**ಕರುಣ ಪ್ರಸಾದ ಎಂಜಲೆದವನಿಗೆ**
**ನರಕ ತಪ್ಪವುದೆ ಸರ್ವಜ್ಞ**

ಗುರು ನರ ರೂಪ ತಾಳಿದ್ದಾನೆ. ಗುರು ಮಾನವ ಎಂದು ಯಾರು ನಿಂದನೆ ಮಾಡಬಾರದು. ಏಕೆಂಕರೆ ಗುರು ಸಾಮಾನ್ಯ ಮನುಷ್ಯನಲ್ಲ. ಅಜ್ಞಾನವನ್ನು ಹೋಗಲಾಡಿಸುವವನು. ಶಿವ ಶಿಲೆಯಲ್ಲ ಕರುಣೆ. ಪ್ರಸಾದ ಬರಿ ಎಂಜಲಲ್ಲ. ಆದ ಕಾರಣ ಗುರುವಿನ ನಿಂದನೆ ಮಾಡಬಾರದು. ನರಕ ಅನುಭವಿಸಬೇಕಾಗುತ್ತದೆ.

**ಉರಿಯುದಕ ಮಾರುತವು । ಉರಗ ಹರಿ ನಾಗವು**
**ಗುರುವಾಜ್ಞೆಗಂಜಿ ನಿಲುವುವು, ಇದನು ನರ**
**ರರಿಯದಲೆ ಕೆಡಗು ಸರ್ವಜ್ಞ**

ಬೆಂಕಿ, ನೀರು, ಗಾಳಿ, ಹಾವು, ಸಿಂಹ ಮತ್ತು ಆನೆ ಗುರುವಾದನಿಗೆ ಅಂಜಿ ನಿಲ್ಲುತ್ತದೆ. ಅಂತ ಶಕ್ತಿ ಗುರುವಿಗೆ ಇದೆ ಎಂದಿದ್ದಾನೆ.

ಒಟ್ಟಾರೆ ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿಗೆ ಮಹತ್ವ ಸಂಬಂಧಸಿದಂತೆ ಸರಳವಾದ ಭಾಷೆಯಲ್ಲಿ ವಿವರಿಸಿದ್ದಾನೆ. ಅಂದರೆ ಗುರುವಿನಿಂದ ಶಾಪ ಮುಕ್ತಿ, ಆತ್ಮಜ್ಞಾನದ ಅರಿವು, ಮಾರ್ಗದರ್ಶಕ ಮತ್ತು ಶಿವನಾಗುತ್ತಾನೆ.

**ಪರಾಮರ್ಶನ ಗ್ರಂಥಗಳು:**


1. ಬಸವರಾಜು ಎಲ್. (2012). ಸರ್ವಜ್ಞನ ವಚನಗಳು (ಸಂ). ಗೀತಾ ಬುಕ್ ಹೌಸ್. ಮೈಸೂರು.
2. ಚನ್ನಪ್ಪ ಉತ್ತಂಗಿ. (2014). ಸರ್ವಜ್ಞನ ವಚನಗಳು (ಸಂ). ಪ್ರಕಾಶ ಸಾಹಿತ್ಯ. ಬೆಂಗಳೂರು.
3. ಮುಗುಳಿ ರಂ. ಶ್ರೀ. (2010). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
4. ಶಾಮರಾಯ ತ. ಸು. (2005). ಕನ್ನಡ ಸಾಹಿತ್ಯ ಚರಿತ್ರೆ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು.